

ಹಾಗೆ ಕೂಡಿಡುವ ಯೋಚನೆ ಮಾಡಲ್ಲ. ಹೆಂಡತಿ ಮಕ್ಕಳನ್ನು ಕರ್ಕೊಂಡು ಬಂದು ಎಂಜಾಯ್ ಮಾಡ್ತಾರೆ. ನೋಡು, ಎಲ್ರೂ ಸೆಲ್ಫೀ ತಗೊಂಡು ಸ್ಟೇಟಸ್ ಹಾಕೋದ್ರಲ್ಲಿ ಬಿಜಿಯಾಗಿದ್ದಾರೆ. ಮೊದಲೆಲ್ಲಾ ಹೀಗಿತ್ತಾ? ಅಪ್ಪನ ಹತ್ರ ಹತ್ತು ರೂಪಾಯಿ ತಗೋಳೋ ಹೊತ್ತಿಗೆ ಒದ್ದಾಡ್ತಿದ್ವಿ. ಈಗ ಹಾಗಿಲ್ಲ. ಅಪ್ಪಂದಿರೇ ಕರ್ಕೊಂಡು ಬರ್ತಾರೆ, ನೋಡು' ದಿವಾಕರನ ಮಾತಿಗೆ ಅಶೋಕ ಸುತ್ತ ನೋಡಿದ. ಹೌದು! ಎಲ್ಲರೂ ಅವರವರ ಲೋಕದಲ್ಲಿ ವ್ಯಸ್ತರು. ಖುಷಿಯಾಗಿದ್ದಾರೆ.

ನಾನೂ ಹೀಗೆಯೇ ಖುಷಿಯಾಗಿದ್ದೆನಲ್ಲವೇ, ನನ್ನೊಂದಿಗೆ ಅವಳಿದ್ದ ಕಾಲವೆಲ್ಲವೂ ಈ ಸಂಭ್ರಮ ಪ್ರತೀಕ್ಷಣವೂ ಇತ್ತು. ಯಾವ ಲೈಟಿನ ಸರ ಇಲ್ಲದಿದ್ದರೂ ಬದುಕಿನಲ್ಲಿ ಬಣ್ಣದ ಬೆಳಕು. ಹೀಗೆಯೇ ಇಂಥದ್ದೇ ಒಂದು ಬಂಡೆಯ ಮೇಲೆ ಕೂತು ಕಳೆದ ಕಾಲಕ್ಕೆ ಲೆಕ್ಕವಿದೆಯೆ? ತೆಪ್ಪೋತ್ಸವ ನೋಡಿದ್ದಕ್ಕಿಂತ ಅದರ ಬೆಳಕು ಅವಳ ಕೆನ್ನೆಯ ಮೇಲೆ ಪ್ರತಿಫಲಿಸಿದಾಗ ಕಾಣುವ ಬಣ್ಣವನ್ನು ನೋಡುವುದೇ ಸಂಭ್ರಮ. ಆಗ ತಾನೇ ಕೊಂಡ ಜುಮುಕಿಯನ್ನು ಕಿವಿಗೇರಿಸಿಕೊಂಡು, ಮುಂಗುರುಳನ್ನು ಕಿವಿ ಹಿಂದೆ ತಳ್ಳುತ್ತಾ, ಕ್ಷಣಕ್ಕೊಮ್ಮೆ ತನ್ನನ್ನು ನೋಡುತ್ತಾ ಚುರುಮುರಿ ತಿನ್ನುವ ಅವಳ ಮೊಗದ ಲಾಸ್ಯ ಇಲ್ಲೇ ಎಲ್ಲೋ ಕಳೆದು ಹೋಯಿತು.

ಮತ್ತೂ ಭ್ರಮೆ. ಅವಳಿಲ್ಲೇ ಎಲ್ಲೋ ಇದ್ದಾಳೆ. ಹತ್ತು ವರ್ಷಗಳ ಹಿಂದೆ ಇದೇ ಜಾತ್ರೆಯ ಹಿಂದಿನ ದಿನ ತನ್ನ ಕೈಯೊಳಗಿದ್ದ ಅವಳ ಕೈಯನ್ನು ಎಳೆದುಕೊಂಡು ತಿರುಗಿ ನೋಡದೇ ನಡೆದಳು. ಮತ್ತೆ ಬಂದಿರಬಹುದೇ?

'ಏನು ಯೋಚಿಸ್ತೀಯಾ ಅಶೋಕ? ದೇವಯಾನಿಯ ನೆನಪಾಯ್ತಾ? ಇಷ್ಟು ವರ್ಷಗಳಾದರೂ, ಬದುಕಿನಲ್ಲಿ ಇಷ್ಟು ದೂರ ಬಂದ ಮೇಲೂ ನಿನಗೆ ಅವಳ ನೆನಪಿದೆಯಾ? ಅಷ್ಟೊಂದು ಟ್ರೂ ಲವ್ವಾ?' ದಿವಾಕರನಿಗೆ ತಮಾಷೆ.

'ಕೆಲವನ್ನು ಮರೆಯೋಕೆ ಆಗಲ್ಲ. ಇಂಥದ್ದೇ ಒಂದು ಜಾತ್ರೆಯಲ್ಲಿ ಕಂಡಳು. ಹಾಗೇ ಪರಿಚಯ. ಸ್ನೇಹ ಪ್ರೀತಿಯಾಯ್ತು. ಅದೇ ಪ್ರೀತಿಯಲ್ಲಿ ಐದಾರು ವರ್ಷಗಳೇ ಕಳೆದು ಹೋಯ್ತು. ಪ್ರೀತಿಗೆ ಯಾವ ಕಟ್ಟುಪಾಡುಗಳು ಇರೋಲ್ಲ. ಮದುವೆಗೆ ಮಾತ್ರಾ ನೂರೆಂಟು. ಏನೋ ಒಂದಷ್ಟು ಕಾರಣಗಳನ್ನು ಕೊಟ್ಟು ಹೋದಳು. ಹೋಗುವಾಗ ಅವಳಿಗೂ ನೋವಿತ್ತು. ಹೆಣ್ಣು ಅವಳು. ಮುಚ್ಚಿಡೋದು ಜನ್ಮಜಾತವಾಗಿ ಬಂದಿರತ್ತೆ.

ಎಲ್ಲವನ್ನೂ ನುಂಗಿದಳು. ನುಂಗುತ್ತಲೇ ಬದುಕಿರ್ತಾಳೆ. ಮತ್ತೆಲ್ಲಾದರೂ ಕಾಣ್ತಾಳಾ, ಕಂಡರೆ ಮಾತಾಡ್ತಾಳಾ ಅಂತ ಒಂದು ಯೋಚನೆ, ಅಷ್ಟೇ' ಅಶೋಕ ನುಡಿದ.

ಅಷ್ಟೊತ್ತಿಗೆ ದೇವರನ್ನು ತರಲಾಯಿತು. ತೆಪ್ಪೋತ್ಸವ ಆರಂಭವಾಯಿತು. ಅದರ ಹಿಂದೆ ಪಟಾಕಿಗಳ ಸುರಿಮಳೆ. ಮೊದಲಿನ ಅಶೋಕನಾಗಿದ್ದರೆ ಪ್ರತಿ ಸದ್ದನ್ನು ಖುಷಿಯಿಂದ ಅನುಭವಿಸುತ್ತಿದ್ದ. ಪಟಾಕಿಯ ಸದ್ದಿನ ನಡುವೆ ಅವಳು ಸಿಡಿಸುವ ಮಾತುಗಳಿಗೆ ಕಿವಿಯಾಗಿ, ಅವಳ